# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಯಾದಗಿರಿ ಜಿಲ್ಲೆ, ಯಾದಗಿರಿ

(ದೂ: 08473 253700, ಫ್ಯಾಕ್ಸ್: 08473 253701, E-mail : adcydg123@gmail.com)

ಸಂ/ಕಂ/ಜನಸ್ಪಂದನ/2018-19 ದಿ:12.09.2018

ಇವರಿಗೆ,
ತಹಸೀಲ್ದಾರರು,
ಯಾದಗಿರಿ/ಶಹಾಪೂರ/ಸುರಪುರ
ಗುರುಮಿಠಕಲ್/ವಡಗೇರಾ/ಹುಣಸಗಿ.

14/9/18

ಮಾನ್ಯರೇ,

ವಿಷಯ:-, ದಿ:19-09-2018 ಹಾಗೂ ದಿ:21-09-2018ರಂದು ಹೋಬಳಿ ಮಟ್ಟದಲ್ಲಿ ಕಂದಾಯ ಅದಾಲತ್/ಪಿಂಚಣಿ ಅದಾಲತ್/ ಜನಸಂಪರ್ಕ ಸಭೆಯನ್ನು ಜರುಗಿಸುವ ಕುರಿತು.

ಉಲ್ಲೇಖ:- ದಿ:11-09-2018ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಕಂದಾಯ ಅಧಿಕಾರಿಗಳ ಸಭೆಯಲ್ಲಿ ನಿರ್ದೇಶಿಸಿದಂತೆ.

*~*~*~*

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ನಿಮಗೆ ತಿಳಿದಂತೆ ದಿನಾಂಕ:11.09.2018 ರಂದು ಮಾನ್ಯ ಜಿಲ್ಲಾಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕಂದಾಯ ಇಲಾಖೆ ಅಧಿಕಾರಿಗಳ ಸಭೆಯಲ್ಲಿ, ತಾಲ್ಲೂಕಿನ ಹೋಬಳಿ ಮಟ್ಟದಲ್ಲಿ ಕಂದಾಯ ಆದಾಲತ್/ಪಿಂಚಣಿ ಆದಾಲತ್ ಹಾಗೂ ಜನಸಂಪರ್ಕ ಸಭೆ ಜರುಗಿಸಲು ನಿರ್ದೇಶನ ನೀಡಲಾಗಿದೆ. ಸದರಿ ಸಭೆಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳು, ಪಹಣಿ ತಿದ್ದುಪಡಿ, ಸಾಮಾಜಿಕ ಭದ್ರತೆ ಯೋಜನೆಯಡಿಯಲ್ಲಿ ಪಿಂಚಣಿಯಿಂದ ವಂಚಿತರಾದ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಮಂಜೂರಿ, ಇನ್ನಿತರ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲಿಯೇ ಇತ್ಯಾರ್ಥಪಡಿಸುವಂತೆ ಅಗತ್ಯ ಕ್ರಮ ಕೈಗೊಳ್ಳುವುದು, ಅದರಂತೆ ತಾಲ್ಲೂಕಿನ ಹೋಬಳಿವಾರು ನಡೆಸಬೇಕಾದ ಸಂಪರ್ಕ ಸಭೆ/ಆದಾಲತ್‌ಗಳ ವೇಳಾ ಪಟ್ಟಿಯನ್ನು ಈ ಕೆಳಗಿನಂತೆ ನಿಗಧಿಪಡಿಸಲಾಗಿದೆ.

| ಕ್ರ.ಸಂ. | ತಾಲ್ಲೂಕ | ಹೋಬಳಿ | ದಿನಾಂಕ | ಸಮಯ |
|---|---|---|---|---|
| 1 | ಶಹಾಪೂರ | ಗೋಗಿ<br>ದೋರನಹಳ್ಳಿ | 19-09-2018 | ಬೆಳಗ್ಗೆ 10-ರಿಂದ 1- ರ ವರಗೆ<br>ಮಧ್ಯಾಹ್ನ 2-ರಿಂದ 5-ರ ವರೆಗೆ |
| 2 | ಸುರಪುರ | ಕಕ್ಕೇರಾ<br>ಸುರಪುರ | 19-09-2018 | ಬೆಳಗ್ಗೆ 10-ರಿಂದ 1- ರ ವರಗೆ<br>ಮಧ್ಯಾಹ್ನ 2-ರಿಂದ 5-ರ ವರೆಗೆ |
| 3 | ಯಾದಗಿರಿ | ಬಳಿಚಕ್ರ<br>ಸೈದಾಪೂರ | 19-09-2018 | ಮಧ್ಯಾಹ್ನ 2-ರಿಂದ 5-ರ ವರೆಗೆ |
| 4 | ಗುರುಮಿಠಕಲ್ | ಗುರುಮಿಠಕಲ್<br>ಕೊಂಕಲ್ | 21-09-2018 | ಬೆಳಗ್ಗೆ 10-ರಿಂದ 1- ರ ವರಗೆ |
| 5 | ವಡಗೇರಾ | ವಡಗೇರಾ<br>ಹೈಯ್ಯಾಳ | 21-09-2018 | ಮಧ್ಯಾಹ್ನ 2-ರಿಂದ 5-ರ ವರೆಗೆ |
| 6 | ಹುಣಸಗಿ | ಹುಣಸಗಿ<br>ಕೊಂಡೇಕಲ್ | 21-09-2018 | ಮಧ್ಯಾಹ್ನ 2-ರಿಂದ 5-ರ ವರೆಗೆ |

ಮೇಲ್ಕಾಣಿಸಿದ ವೇಳಾ ಪಟ್ಟಿಯಂತೆ ಕಾರ್ಯಕ್ರಮವನ್ನು ಜರುಗಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವುದು ಹಾಗೂ ಪ್ರತಿ ಮಾಹೆ ಸಭೆಗಳನ್ನು ಕಡ್ಡಾಯವಾಗಿ ಜರುಗಿಸತಕ್ಕದ್ದು. ಸದರಿ ಸಭೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು ಭಾಗವಹಿಸುವರು.

ತಮ್ಮ ವಿಶ್ವಾಸಿ,

ಅಪರ ಜಿಲ್ಲಾಧಿಕಾರಿಗಳು
ಯಾದಗಿರಿ.

ಪ್ರತಿಯನ್ನು:- ಸಹಾಯಕ ಆಯುಕ್ತರು, ಯಾದಗಿರಿ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.